# ‘ಒಟ್ಟು ಮನ್ಸಾ ಕೆಟ್ಟೋಗವ್ನೆ!’

ಮನರಂಜನೆಯ ತಂಬೂರಿಯಿಂದ ಹಿತೋಪದೇಶದ ನಾದ ಹೊರಡಿಸುವುದರಲ್ಲಿ ಯೋಗರಾಜ ಭಟ್ಟರದು ಪಳಗಿದ ಕೈ. ಹಾಗಾಗಿಯೇ ಅವರು ಬರೆದ ಎಷ್ಟೋ ಹಾಡುಗಳು ಪೋಲಿಯಾಗಿಯೂ, ಫಿಲಾಸಫಿಯ ಸೋಡಾಬಾಟಲಿಯ ಗೋಲಿಯಾಗಿಯೂ ಕಾಣಿಸುತ್ತಿರುತ್ತದೆ. ಜನರು ಅನುದಿನ ಅಡ್ಡಾಡುವ ದಾರಿಯಲ್ಲಿಯೇ ಚದುರಿಬಿದ್ದ ಶಬ್ದಗಳನ್ನು ಹೆಕ್ಕಿ ಅದನ್ನು ವಿಶಿಷ್ಟವಾಗಿ ಹೆಣೆದು ಜನರ ಕಿವಿಗಳಲ್ಲಿಯೇ ಬಿತ್ತುವ ಪದ್ಯವ್ಯವಸಾಯ ಅವರದ್ದು.

‘ಡಿಎನ್‌ಎ’ ಸಿನಿಮಾದ ಪ್ರಮೋಷನ್ ಗೀತೆ, ಭಟ್ಟರ ಈ ಎಲ್ಲ ಗುಣವನ್ನೂ ಸಮರ್ಥವಾಗಿ ದುಡಿಸಿಕೊಂಡು ರೂಪುತಳೆದಂತಿದೆ. ‘ನಾವ್ಯಾರು ಎಲ್ಲಿಂದ ಬಂದಿದೀವಿ? ನಾವ್ಯಾಕೆ ಸ್ವಾಮಿ ಹಿಂಗಿದೀವಿ?’ ಎಂಬ ಸಿಲ್ಲಿಯಾಗಿಯೂ ಅಷ್ಟೇ ಮೂಲಭೂತವಾಗಿಯೂ ಕಾಣುವ ಪ್ರಶ್ನೆಯೊಟ್ಟಿಗೇ ಶುರುವಾಗುವ ಹಾಡು, ‘ಒಟ್ಟು ಮನ್ಸಾ ಕೆಟ್ಟೋಗವ್ನೆ’ ಎನ್ನುತ್ತದೆ. ‘ನೀನ್ಯಾರು ಅಂತ ಹೇಳ್ತಾರೆ, ತಿಳ್ಕಬೇಡ. ಕೆಟ್ಟೋಯ್ತೀಯಾ’ ಎಂದು ಹೇಳುತ್ತಲೇ ಮನುಷ್ಯನ ವಿಕಾಸದ ಹಾದಿಯಲ್ಲಿ ಇರುವ ನೂರಾರು ತಿರುವುಗಳು, ಕ್ರಾಸ್ ಕನೆಕ್ಷನ್‌ಗಳನ್ನು ಲಘು ಧಾಟಿಯಲ್ಲಿಯೇ ಹೇಳುತ್ತ ಹೋಗುತ್ತದೆ. ನಾನು, ನನ್ನದು, ನನ್ನ ಜಾತಿ, ನನ್ನ ಧರ್ಮ ಶುದ್ಧ – ಶ್ರೇಷ್ಠ ಎಂಬುದೆಲ್ಲ ಎಂಥ ಭ್ರಮೆ ಎಂಬ ದೊಡ್ಡ ಸತ್ಯವನ್ನು ಹಳ್ಳಿ ಹೈದನೊಬ್ಬನ ಘಾಟಿ ಮಾತುಗಳ ಧಾಟಿಯಲ್ಲಿ ಹೇಳುತ್ತ ಹೋಗುವ ಇದು, ನಿಲ್ಲುವುದು ‘ಸಂಬಂಜ ಅನ್ನೋದು ದೊಡ್ಡು ಕನಾ’ ಎಂಬ ದೇವನೂರ ಮಹಾದೇವ ಅವರ ಉಜ್ವಲ ಸಾಲಿನ ಬುಡದಲ್ಲಿ. ‘ತೊಟ್ಲು ಚಟ್ಟ ಇರಬಹುದೇನೋ ಅಣ್ಣ ತಮ್ಮ’ ಎಂಬ ಸಾಲು, ಅಡಿಗರ ‘ತೊಟ್ಟಿಲಂಗಡಿಯಲ್ಲಿ ಬೊಂಬು ತುಂಬ ಅಗ್ಗ/ ಜಾತಕರ್ಮಾದಿ ನಿರತ ಈ ಪುರೋಹಿತಭಟ್ಟ ಅಪರಪ್ರಯೋಗದಲಿ ಪಾರಂಗತ’ ಎಂಬ ಸಾಲನ್ನು ನೆನಪಿಸುವುದು ಆಕಸ್ಮಿಕವೇನೂ ಅಲ್ಲ.

ಧರ್ಮ, ಸಮುದಾಯ, ಶ್ರೇಷ್ಠತೆಯ ವ್ಯಸನ, ಆಹಾರ, ಸಾಮಾಜಿಕ ಅವ್ಯವಸ್ಥೆಗಳು ಎಲ್ಲದರ ಬಗ್ಗೆಯೂ ಈ ಹಾಡು ಇಷ್ಟೇ ಲಘುವಾಗಿ ನಗುವುಕ್ಕಿಸುವ ಹಾಗೆಯೇ ಹೇಳುತ್ತದೆ. ಎಲ್ಲ ದಿಕ್ಕುಗಳಿಂದಲೂ ವಿಷಬಾಣಗಳು ಸುರಿಯುತ್ತಿರುವ ಈ ಕಾಲದಲ್ಲಿ ಈ ಹಾಡು, ಮನಸ್ಸಿಗೆ ಹಚ್ಚಿಕೊಳ್ಳುವ ಮುಲಾಮಾಗಿ ಕೆಲಸ ಮಾಡುವ ಸತ್ವವನ್ನು ಹೊಂದಿದೆ. ಹಾಗಾಗಿ ಇದನ್ನು ನಮ್ಮ ಕಾಲದ ಜನಪದ ಹಾಡು ಅನ್ನಲಡ್ಡಿಯಿಲ್ಲ. ನೀನಾಸಂ ಸತೀಶ್ ಈ ಹಾಡನ್ನು ಹಾಡಿದ್ದು, ಸ್ವತಃ ಭಟ್ಟರು ನಡುವಿನ ಕೆಲವು ನಗೆಮಾತುಗಳಿಗೆ ಧ್ವನಿಯಾಗಿದ್ದಾರೆ.

ಹಾಡನ್ನು bit.ly/3sXywxa ಕೊಂಡಿ ಬಳಸಿ ಆಲಿಸಬಹುದು. ■





# ಶೀತಲ್ ಸಿಟ್ಟು!

ಶೀತಲ್ ಶೆಟ್ಟಿ ಸಿಟ್ಟಾಗಿದ್ದಾರೆ. ಅವರ ಸಿಟ್ಟಿಗೆ ಕಾರಣವಾಗಿರುವುದು ಟ್ರೋಲ್ ಪೇಜ್‌ಗಳು. ಸೋಷಿಯಲ್ ಮೀಡಿಯಾದಾದಲ್ಲಿ ಅಣಬೆಗಳ ಹಾಗೆ ಎದ್ದಿರುವ ಟ್ರೋಲ್ ಪುಟಗಳೆಂದರೆ ಸಿನಿಮಾದವರಿಗೆ ತುಸು ಹೆಚ್ಚೇ ಪ್ರೀತಿ. ಇದಕ್ಕೆ ಕಾರಣ ಅವು ಸೋಷಿಯಲ್ ಮೀಡಿಯಾದಲ್ಲಿ ಪ್ರಚಾರದ ಹವಾ ಎಬ್ಬಿಸಲು ಚಿಮ್ಮುಹಲಗೆಗಳ ಹಾಗೆ ಕೆಲಸ ಮಾಡುತ್ತವೆ ಎಂಬುದು. ಆದರೆ ಈಗ ಸಿನಿಮಾದವರೇ ಆದ ಶೀತಲ್ ಶೆಟ್ಟಿ ಟ್ರೋಲ್ ಪೇಜುಗಳ ವಿರುದ್ಧ ಧ್ವನಿಯೆತ್ತಿದ್ದಾರೆ.

ಶೀತಲ್ ಟ್ರೋಲ್ ಪೇಜ್ ವಿರೋಧಿಯೇನಲ್ಲ. ಹಾಗೆ ನೋಡಿದರೆ ಅವರು ಹಲವು ಟ್ರೋಲ್ ಪೇಜ್‌ಗಳನ್ನು ಹಿಂಬಾಲಿಸುತ್ತಾರಂತೆ. ಅಲ್ಲಿನ ತಮಾಷೆಯ ಮೀಮ್ಸ್‌ಗಳನ್ನು ಎಂಜಾಯ್ ಕೂಡ ಮಾಡುತ್ತಾರಂತೆ. ಆದರೆ ಕೆಲವು ಟ್ರೋಲ್ ಪೇಜುಗಳು ಹಾಸ್ಯದ ಹದ್ದನ್ನೂ ಮೀರಿ ಕೊಳಚೆಯನ್ನು ಎರಚುತ್ತಿವೆ ಎನ್ನುವುದು ಅವರ ಆಕ್ಷೇಪ. ಅದು ಬರೀ ಆಕ್ಷೇಪವಷ್ಟೇ ಅಲ್ಲ, ನಿಜವೂ ಹೌದು ಎಂಬುದನ್ನು ಅವರು ಹಂಚಿಕೊಂಡಿರುವ ಟ್ರೋಲ್‌ಪುಟಗಳ ಸ್ಕ್ರೀನ್‌ಶಾಟ್‌ಗಳೇ ಹೇಳುತ್ತವೆ. ಕೆಲವು ಟ್ರೋಲ್‌ಪೇಜುಗಳಲ್ಲಿ ಬಿಗ್ ಬಾಸ್ ಸ್ಪರ್ಧಿಗಳು, ಬೇರೆ ಬೇರೆ ಕಡೆಗಳ ಹೆಣ್ಣುಮಕ್ಕಳ ಚಿತ್ರವನ್ನು ಹಾಕಿ ಅವರ ದೇಹದ ಅಂಗಾಂಗಗಳ ಬಗ್ಗೆ ಅಸಹ್ಯಕರವಾದ ಕಮೆಂಟ್ ಹಾಕುವುದು ಕಂಡು ಸಹಜವಾಗಿಯೇ ಶೀತಲ್ ಶೆಟ್ಟಿ ಅವರಿಗೆ ಸಿಟ್ಟು ಬಂದಿದೆ. ‘ಇದು ಕ್ರಿಯೇಟಿವಿಟಿ ಅಲ್ಲ, ಇದನ್ನು ನೋಡಿ ಸುಮ್ಮನಿರಲು ಸಾಧ್ಯವಿಲ್ಲ‘ ಎಂದು ಅವರು ಗಟ್ಟಿಯಾಗಿಯೇ ಹೇಳಿದ್ದಾರೆ. ಅಷ್ಟೇ ಅಲ್ಲ, ‘ಇಂಥವುಗಳನ್ನು ನೋಡಿ ಖುಷಿಪಡಬೇಡಿ’ ಎಂದೂ ಹೇಳಿದ್ದಾರೆ.

ಹೆಚ್ಚು ಜನ ನೋಡು, ಕಮೆಂಟ್ ಮಾಡುವುದನ್ನು ಮೀಮ್ಸ್ ಮಾಡುವುದು ಟ್ರೋಲ್ ಪೇಜುಗಳ ಲೆಕ್ಕಾಚಾರ. ಹಾಗಾದರೆ ಇಂಥ ಮೀಮ್ಸ್‌ಗಳನ್ನು ಸಾಕಷ್ಟು ಜನ ನೋಡುತ್ತಾರೆ ಎಂದಾಯಿತಲ್ಲವೇ? ಶೀತಲ್ ಶೆಟ್ಟಿ ಇದರ ಬಗ್ಗೆ ಧ್ವನಿಯೆತ್ತಿರುವುದು ಸ್ವಾಗತಾರ್ಹ. ಆದರೆ ಅದನ್ನು ಕದ್ದುನೋಡಿ ಒಳಗೊಳಗೇ ಎಂಜಾಯ್ ಮಾಡುವ ಜನರು ಸಿಟ್ಟಿಗೇಳದೇ ಹೋದರೆ ಇಂಥ ಕೀಳು ಅಭಿರುಚಿಯ ಮೆರವಣಿಗೆ ನಿಲ್ಲುವುದು ಸಾಧ್ಯವಿಲ್ಲವೇನೋ. ■